


ಎಡದಿಂದ ಬಲಕ್ಕೆ:

1. ಸಕಲ ವೈಭವವನ್ನೂ ಮೆರೆಸಬಲ್ಲದ್ದು ಇದೊಂದೇ ಭೂಮಿ 3
3. ಆತನನ್ನು ಮುತ್ತಿರುವ ಡಜನ್ ಕ್ಲೇಶ, ತೊಂದರೆಗಳು ಹಿಂದುಮುಂದು 3
4. ಆಕೆ ಕರ್ತವ್ಯಕ್ಕೆ ಹಾಜರಾದದ್ದು ಚಾಂದ್ರಮಾನದ ಯಾವ ತಿಂಗಳು? 3
6. ಗಾಬರಿಯಾಗಬೇಡಿ, ಕಡಲೆಂದರೇ ಹಾಗೆ ಆಳ, ಗಹನ 3
7. ಬಂಧನದಲ್ಲಿ ಇರಿಸುವುದಾಗಿ ಹೇಳಿ ಹೆದರುವಂತೆ ಮಾಡು 4
9. ಮತ್ತೆ ಮತ್ತೆ ಚಾಮರವನ್ನು ಮಾಯ ಮಾಡಿದ್ದು ಅದೆಂಥ ಚಾತುರ್ಯ! 4
11. ಮುಸುಕು ಧರಿಸಿದ್ದರೂ ಧ್ವನಿ ಮಾತ್ರ ಒಳ್ಳೇ ಸಿಹಿ 4
13. ಗಳಿಸುವ ಮಾರ್ಗ ತಿಳಿಯದೇ ಕಷ್ಟಕ್ಕೆ ಸಿಲುಕಿದ್ದಾನೆ ದನಗಾಹಿ 4
15. ಕಂದನಿಗೆ ಬಂದ ಕಷ್ಟವನ್ನು ಕಂಡು ಕಣ್ಣೀರು 3
17. ಕುಟುಕುವ ಜೀವಿ ಅಲ್ಲ ಬಿಡಿ, ಇದು ಕೋಳಿ ತಾನೇ? 3
18. ದೇವತೆಯಂತೆ ಬಂದು ಕಾಪಾಡಿದವನನ್ನು ಕಾಣಲು ಭಾರೀ ಆತುರ 3
19. ಕತ್ತೆಯನ್ನು ಪಳಗಿಸುವ ಕ್ರಮದ ನಿರೂಪಣೆ 3

ಮೇಲಿಂದ ಕೆಳಕ್ಕೆ:

1. ಭಜನೆಗೆ ಗುಂಪು ಸೇರಿದಲ್ಲಿ ಸರ್ಪ ಕಾಣಿಸಿತೇ? 3
2. ನಕ್ಕು ಸುಮ್ಮನಾದರೆ ಇಲ್ಲವೆಂದೇ ಅರ್ಥ 3
3. ಬಡವರಿಗೆಲ್ಲ ನೀಡಿದ್ದು ಒಂದೊಂದು ಅಗಲ ಬಾಯಿಯ ಪಾತ್ರೆ 3
5. ಮುದುಕನಾದರೂ ಆತ ತುಂಬ ಘಾಟಿ ಮನುಷ್ಯ 3
7. ಎಲ್ಲರೂ ಬಯಸುವಂತೆ ಬಾಳನ್ನು ಅಭಿವೃದ್ಧಿಗೊಳಿಸು 4
8. ಎಂಥ ಸುಂದರಾಕಾರ ಈ ನಮ್ಮ ಚಂದ್ರ 4
9. ಚತುರರಿಗೆ ತುಂಬ ಇಷ್ಟವಾಗುವ ಯುದ್ಧದ ಆಟ 4
10. ರಂಗು ರಂಗಿನ ಅರಣ್ಯ ಯುದ್ಧ ಭೂಮಿಯಾಯಿತೇ? 4
12. ಮುಂದಕ್ಕೇನೇ ಆಗಲಿ, ಈಗ ಕೆಳಕ್ಕೆ ನೆಗೆ 3
14. ವಾಸ್ತವವಾಗಿ ಇದೇ ಅತಿ ಸುಂದರ ಋತುಮಾನ 3
15. ಕಟ್ಟಡ ಕಟ್ಟಲು ಹೊರಟವರಿಗೆ ನಾನಾ ವಿಧ ಕೇಡು, ಕಷ್ಟ 3
16. ದೋಣಿಯನ್ನು ನಡೆಸುತ್ತಿರುವ ವೇಗ ಬಹಳ ಕಡಿಮೆ 3

## 30-04-2020 ಉತ್ತರಗಳು

ಎಡದಿಂದ ಬಲಕ್ಕೆ:

1. ನವೋದಯ 3. ಕೊರಡು 4. ವರಾತ 6. ಡಮರುಗ 8. ಸಂಕುಚಿತ 10. ತರತಮ 12. ನೆನಪಿಸು 16. ನಯನ 17. ರಿಪೇರಿ 18. ವಿರೋಧಿಸು

ಮೇಲಿಂದ ಕೆಳಕ್ಕೆ:

1. ನಡುಕ 2. ಯವನ 3. ಕೊನರು 5. ತಳುಕು 6. ಡಕಾಯಿತ 7. ಗಮಗಮ 8. ಸಂಭಾವನೆ 9. ತಲುಪಿಸು 11. ತಪನ 13. ನಗಾರಿ 14. ಮನವಿ 15. ಧರಿಸು

ಪ್ರಶ್ನಾ ಂಕಣ

# ಮಸಾಯ್ ಮಾರಾ: ಏಕೆ ಅದ್ಭುತ?

ಮಸಾಯ್ ಮಾರಾ ಅದು ಆಫ್ರಿಕ ಖಂಡದ ಕೀನ್ಯಾ ದೇಶದಲ್ಲಿರುವ ಒಂದು ಜಗತ್ಪ್ರಸಿದ್ಧ ಪ್ರಾಣಿ ಸಂರಕ್ಷಣಾ ಮೀಸಲು ಪ್ರದೇಶ (Game Reserve). ಕೀನ್ಯಾದ ದಕ್ಷಿಣಕ್ಕಿರುವ ನೆರೆಯ ತಾಂಜಾನಿಯಾ ದೇಶದ ಅಷ್ಟೇ ವಿಶ್ವ ಪ್ರಸಿದ್ಧ 'ಸೆರೆಂಗೆಟಿ ರಾಷ್ಟ್ರೀಯ ಉದ್ಯಾನ'ಕ್ಕೆ ಹೊಂದಿದಂತೆ ಹರಡಿಕೊಂಡಿರುವ ಮಸಾಯ್ ಮಾರಾದ ವಿಸ್ತಾರ 1,500 ಚದರ ಕಿಲೋಮೀಟರ್.

ಹುಲ್ಲು ಬಯಲು ಜೀವಾವಾರವಾಗಿರುವ ಮಸಾಯ್ ಮಾರಾದ ಮೊದಲ ಅದ್ಭುತ ಅಲ್ಲಿನ ಪ್ರಾಣಿ ದಟ್ಟಣೆ. ಈ ಹುಲ್ಲುಗಾವಲಿನಲ್ಲಿ ನೆಲೆಸಿರುವ ಪ್ರಾಣಿಗಳ ವೈವಿಧ್ಯ ಮತ್ತು ನಿಬಿಡತೆ ಕಲ್ಪನಾತೀತ. ಹುಲ್ಲನ್ನು ಮೇಯುವ ಪ್ರಾಣಿಗಳಾದ ಆನೆ, ಜಿರಾಫ್ (ಚಿತ್ರ 2), ಕಾಡೆಮ್ಮೆ, ಗೇಂಡಾಮೃಗ, ಗೆಜೆಲ್, ಟೋಪಿ, ಜೀಬ್ರಾ, ವಿಲ್ಡೆಬೀಸ್ಟ್, ... ಇತ್ಯಾದಿಗಳ ಜೊತೆಗೆ ಸಿಂಹ (ಚಿತ್ರ 3), ಚಿರತೆ, ಚೀತಾ, ಕಿರುಬ ಇತ್ಯಾದಿ ಬೇಟೆಗಾರ ಪ್ರಾಣಿಗಳು ಭಾರೀ ಸಂಖ್ಯೆಗಳಲ್ಲಿವೆ. ಈ ಪ್ರದೇಶದ ಅತ್ಯಂತ ಪ್ರಮುಖ ಮೇಯುವ ಪ್ರಾಣಿಯಾದ ವಿಲ್ಡೆಬೀಸ್ಟ್ ನ ಸಂಖ್ಯೆ ದಶಲಕ್ಷವನ್ನು ಮೀರುತ್ತದೆ. ಮಸಾಯ್ ಮಾರಾದಲ್ಲಿ 60 ವಿಧಗಳ ಹದ್ದುಗಳೂ ಸೇರಿ ಒಟ್ಟು 470 ಪಕ್ಷಿ ಪ್ರಭೇದಗಳಿವೆ. ಮಸಾಯ್ ಮಾರಾದ ಮೂಲಕ ಮಾರಾ, ಗ್ರುಮೇಟಿ, ತಾಲೆಕ್, ಸ್ಯಾಂಡ್... ಇತ್ಯಾದಿ ನದಿಗಳು ಮತ್ತು ಮಳೆಗಾಲದಲ್ಲಿ ತುಂಬಿ ಹರಿವ ನೂರಾರು ತೊರೆಗಳು ಪ್ರವಹಿಸುತ್ತವೆ. ಮಸಾಯ್ ಮಾರಾದ ನದಿಗಳಲ್ಲಿ ಬೃಹದ್ದೇಹದ ಮೊಸಳೆಗಳು ಹೇರಳ. ಸೆರೆಂಗೆಟಿ ಮತ್ತು ಮಸಾಯ್ ಮಾರಾ ಪ್ರದೇಶಗಳಲ್ಲಿ ಪ್ರತಿ ವರ್ಷ ನಡೆವ ಮೇಯುವ ಪ್ರಾಣಿಗಳ ಮಹಾ ವಲಸೆ 'ದಿ ಗ್ರೇಟ್ ಮೈಗ್ರೇಶನ್' ಎಂದೇ ವಿಶ್ವ ವಿಖ್ಯಾತ ; 'ನಿಸರ್ಗದ ಏಳನೆಯ ಮಹದದ್ಭುತ' ಎಂದೇ ಈ ವಿದ್ಯಮಾನ ವರ್ಗೀಕೃತ.




ಏಕೆಂದರೆ, ಈ ಪ್ರದೇಶದ ಬಹುಪಾಲು ಸರ್ವವಿಧ ಮೇಯುವ ಪ್ರಾಣಿಗಳು ಮಿಲಿಯಾಂತರ ಸಂಖ್ಯೆಯಲ್ಲಿ ಗುಂಪುಗೂಡಿ ಸಮೃದ್ಧ ಮೇವಿಗಾಗಿ ನೂರಾರು ಕಿ.ಮೀ.ಮೀಟರ್ ದೂರವನ್ನು ನಡೆದು ನಡೆದು ಸೆರೆಂಗೆಟಿಯಿಂದ ಮಸಾಯ್ ಮಾರಾಗೆ ವಲಸೆ ವಲಸೆ ಬರುತ್ತವೆ; ಕೆಲವು ತಿಂಗಳುಗಳ ನಂತರ ಮತ್ತೆ ಮಸಾಯ್ ಮಾರಾದಿಂದ ಸೆರೆಂಗೆಟಿಗೆ ಹಿಂದಿರುಗುತ್ತವೆ. ಈ ಸಾಮೂಹಿಕ ವಲಸೆಯಲ್ಲಿ ಸಮೀಪ ಹದಿನೈದು ಲಕ್ಷ ವಿಲ್ಡೆಬೀಸ್ಟ್, ಐದು ಲಕ್ಷ ಗೆಜೆಲ್, ಒಂದು ಲಕ್ಷ ಟೋಪಿ, 18,000 ಎಲ್ಯಾಂಡ್ ಮತ್ತು ಎರಡು ಲಕ್ಷ ಜೀಬ್ರಾಗಳು ಭಾಗವಹಿಸುತ್ತವೆ. ವಿಶೇಷವಾಗಿ ಗ್ರುಮೇಟಿ ಮತ್ತು ಮಾರಾ ನದಿಗಳನ್ನು ದಾಟಿ ಸಾಗುವ (ಚಿತ್ರ 1) ಈ ಪಯಣದ ಹಾದಿಯಲ್ಲಿ ಮೊಸಳೆಗಳು ಮತ್ತಿತರ ಬೇಟೆಗಾರ ಪ್ರಾಣಿಗಳಿಗೆ ಈ ವಲಸೆಗಾರರು ಸಾವಿರಾರು ಸಂಖ್ಯೆಯಲ್ಲಿ ಬಲಿಯಾಗುತ್ತವೆ ಕೂಡ. ನಿಸರ್ಗದ ಮಡಿಲಿನ ಪರಮ ವಿಸ್ಮಯದ ಈ ವಾರ್ಷಿಕ ಕಾರ್ಯಕ್ರಮವೇ ಮಸಾಯ್ ಮಾರಾದ ಅತ್ಯದ್ಭುತ. ಈ ರೋಮಾಂಚಕ ದೃಶ್ಯವನ್ನು ವೀಕ್ಷಿಸಲೆಂದೇ ಮಸಾಯ್ ಮಾರಾಗೆ ಪ್ರತಿವರ್ಷ ಜಗದ ಎಲ್ಲೆಡೆಯಿಂದ ಬರುವ ಪ್ರವಾಸಿಗಳ ಸಂಖ್ಯೆ ಸುಮಾರು ಎರಡು ಲಕ್ಷಕ್ಕೂ ಅಧಿಕ!

■ ಎನ್. ವಾಸುದೇವ್